

# ಕೂಚಿ ಆಭರಣ ಟ್ರೆಂಡ್

ಅಫ್ಘಾನಿಸ್ತಾನದ ಕೂಚಿ ಬುಡಕಟ್ಟು ಜನಾಂಗದವರು ತೊಡುವ ಕೂಚಿ ಆಭರಣ ಇಂದು ನಮ್ಮಲ್ಲಿ ಫ್ಯಾಷನ್ ಟ್ರೆಂಡ್ ಆಗಿದೆ.

■ ಆಶಾ ಎಸ್. ಕುಲಕರ್ಣಿ

ಫ್ಯಾಷನ್ ನಿಂತ ನೀರಲ್ಲ. ದಿನದಿನವೂ ಬದಲಾವಣೆಗಳಾಗುತ್ತಲೇ ಇದೆ ಈ ಜಗತ್ತು. ಆಭರಣ ಲೋಕವೂ ಇದಕ್ಕೆ ಹೊರತಲ್ಲ. ಕಾಲಕ್ಕೆ ತಕ್ಕಂತೆ ವಿವಿಧ ವಿನ್ಯಾಸದ ಆಭರಣಗಳು ಮಾರುಕಟ್ಟೆಗೆ ಬರುತ್ತಲೇ ಇವೆ. ಕೆಲವೊಂದು ಆಭರಣಗಳು ಸ್ವದೇಶದಲ್ಲಿಯೇ ತಯಾರಾಗುತ್ತಿದ್ದರೆ, ಇನ್ನು ಕೆಲವು ಆಭರಣಗಳು ವಿದೇಶದಿಂದ ಆಮದು ಆಗಿ ಇಲ್ಲಿಗೆ ಲಗ್ಗೆ ಇಟ್ಟಿವೆ. ಇಂತಹ ಆಭರಣಗಳಲ್ಲಿ ಅಫ್ಘಾನಿಸ್ತಾನದ ಕೂಚಿ ಎಂಬ ಬುಡಕಟ್ಟು ಜನಾಂಗದವರ ಪಾರಂಪರಿಕ ಆಭರಣಗಳು ಪ್ರಮುಖವಾಗಿವೆ. ಈ ಕೂಚಿ ಆಭರಣಗಳು ಇಂದು ನಮ್ಮ ಫ್ಯಾಷನ್ ಲೋಕಕ್ಕೆ ಭರ್ಜರಿಯಾಗಿಯೇ ಎಂಟ್ರಿ ಕೊಟ್ಟಿವೆ.

ಅಫ್ಘಾನಿಸ್ತಾನದ ಅಲೆಮಾರಿ ಬುಡಕಟ್ಟು ಜನಾಂಗದಲ್ಲಿ ಸಾಕಷ್ಟು ಹೆಸರುವಾಸಿಯಾಗಿರುವ ಈ ಆಭರಣಗಳನ್ನು ಆಕ್ಸಿಡೀಕೃತ ಜರ್ಮನ್ ಬೆಳ್ಳಿ, ಬ್ಲಾಕ್ ಮೆಟಲ್, ವೈಟ್ ಮೆಟಲ್ ಮತ್ತು ಬಣ್ಣದ ಗಾಜಿನಿಂದ ತಯಾರಿಸಲಾಗುತ್ತದೆ. ಕೆಲವೊಮ್ಮೆ ಇವುಗಳಲ್ಲಿ ಬಣ್ಣದ ಕಲ್ಲುಗಳನ್ನೂ ಬಳಸಲಾಗುತ್ತದೆ. ಈ ಕೂಚಿ ಆಭರಣಗಳು ಸಾಂಪ್ರದಾಯಿಕವಾಗಿ ಧರಿಸಲು ಮತ್ತು ಆಧುನಿಕ ಉಡುಪುಗಳ ಮೇಲೂ ಸೈ ಎಂಬಂತೆ ರೂಪಿತಗೊಂಡಿವೆ.

ಮೊದಲೆಲ್ಲಾ ಮಾಡೆಲ್‌ಗಳು ರ್‍ಯಾಂಪ್ ಮೇಲೆ ಈ ಕೂಚಿ ಆಭರಣಗಳನ್ನು ಧರಿಸಿ ಫ್ಯಾಷನ್ ಲೋಕಕ್ಕೆ ಈ ಆಭರಣಗಳನ್ನು ಪರಿಚಯಿಸಿದ್ದರ ಪರಿಣಾಮವಾಗಿ ಇಂದಿನ ಸಿನಿಮಾ ಕಲಾವಿದೆಯರು ಮತ್ತು ಧಾರಾವಾಹಿಗಳಲ್ಲಿ ನಟಿಸುವ ಕಲಾವಿದೆಯರು ತಮ್ಮ ತಮ್ಮ ಚಿತ್ರಗಳಲ್ಲಿ ಮಾತ್ರವಲ್ಲದೆ ತಮ್ಮ ನಿಜ ಜೀವನದಲ್ಲೂ ಈ ಆಭರಣಗಳನ್ನು ತೊಟ್ಟು ಮಹಿಳೆಯರಲ್ಲಿ ಈ ಸಾಂಪ್ರದಾಯಿಕ ಆಭರಣಗಳ ಬಗ್ಗೆ ಒಲವು ಮೂಡಿಸಿದ್ದಾರೆ. ಇದೀಗ ಈ ಆಭರಣಗಳು ಕಾಲೇಜು ವಿದ್ಯಾರ್ಥಿನಿಯರ ಹಾಟ್ ಫೇವರೆಟ್ ಆಗಿವೆ. ಈ ಅಫ್ಘಾನಿ ಕೂಚಿ ಆಭರಣಗಳಲ್ಲಿ ಸಾಕಷ್ಟು ವಿನ್ಯಾಸಗಳಿದ್ದು ಅವುಗಳಲ್ಲಿ ಸೊಂಟಪಟ್ಟಿ, ಕಿವಿಯೋಲೆ, ಜುಮ್ಕಿ, ಬಳೆ, ಬ್ರೇಸ್ಲೆಟ್ ಉಂಗುರ, ಸರ ಮತ್ತು ಕಾಲ್ಗೆಜ್ಜೆಗಳಿವೆ. ವಸ್ತ್ರವಿನ್ಯಾಸಕಾರರು ಈ ಕೂಚಿ ಆಭರಣಗಳನ್ನು ಬಟ್ಟೆಗಳಲ್ಲಿಯೂ ಕೂಡ ಬಳಸಿಕೊಳ್ಳುತ್ತಿದ್ದಾರೆ. ಅದರಂತೆ ಬೇಸಿಗೆ ಕಾಲದಲ್ಲಿ ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಬಳಸುವ ಶಾಲುಗಳು ಇದೀಗ ಮಾರುಕಟ್ಟೆಗೆ ಬಂದಿವೆ. ಈ ತರಹದ ಶಾಲುಗಳ ಅಂಚಿನಲ್ಲೂ ಇಂಥ ಕೂಚಿ ಗೆಜ್ಜೆಯ ಗೊಂಚಲುಗಳನ್ನು ಕಟ್ಟಿ, ಆ ಬಟ್ಟೆಗಳ ಅಂದವನ್ನು ಇನ್ನೂ ಹೆಚ್ಚಿಸಿದ್ದಾರೆ.

ಸಾಕಷ್ಟು ಚಿತ್ರವಿಚಿತ್ರ ಆಕಾರಗಳಲ್ಲಿ, ವಿನ್ಯಾಸಗಳಲ್ಲಿ ತಯಾರಾಗುವ ಈ ಕೂಚಿ ಆಭರಣಗಳು ಎಲ್ಲರ ಮನ ಗೆದ್ದಿವೆ. ಹಾಗೆಯೇ ಈ ಆಭರಣಗಳ ಮಧ್ಯ ಭಾಗದಲ್ಲಿ ಕಲರ್‌ಫುಲ್ ಕಲ್ಲುಗಳನ್ನು ಬಳಸಿರುವುದರಿಂದ ಇವುಗಳನ್ನು ನೀವು ಧರಿಸುವ ಬಟ್ಟೆಗಳಿಗೆ ಮ್ಯಾಚ್ ಮಾಡಿ ಧರಿಸಬಹುದಾಗಿದೆ. ಇದರಿಂದ ಬಟ್ಟೆಗಳ ಅಂದದ ಜೊತೆಗೆ ನಿಮ್ಮ ಅಂದವೂ ಹೆಚ್ಚಾಗುತ್ತದೆ.

ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಬುಡಕಟ್ಟು ಜನಾಂಗದ ಎಲ್ಲಾ ಮಹಿಳೆಯರು ತಮ್ಮ ಆಭರಣಗಳಲ್ಲಿ ನಾಣ್ಯಗಳನ್ನೂ ಬಳಸುತ್ತಿದ್ದರು. ಇದೀಗ ಅದೇ ತರಹದ ನಾಣ್ಯಗಳುಳ್ಳ ಅಫ್ಘಾನಿ ಕೂಚಿ ಆಭರಣಗಳು ಟ್ರೆಂಡಿ ಆಗುತ್ತಿವೆ. ಈ ತರಹದ ನಾಣ್ಯಗಳನ್ನು ಬಳಸಿ ತಯಾರಿಸಲಾದ ಆಭರಣಗಳನ್ನು ಸಭೆ ಸಮಾರಂಭಗಳಲ್ಲಿ ನೀವು ಧರಿಸುವ ರೇಷ್ಮೆ ಸೀರೆಗಳಿಗೂ ಮ್ಯಾಚ್ ಮಾಡಿ ಧರಿಸಬಹುದಾಗಿದೆ. ಇದರಿಂದ ಸೀರೆಯ ಅಂದವೂ ಇಮ್ಮಡಿಯಾಗುತ್ತದೆ.

ಆಭರಣ ವಿನ್ಯಾಸಕಾರರು ಹಳೆ ಕಾಲದ ನಾಣ್ಯಗಳಿಗೆ ಹೋಲುವಂಥ ವಸ್ತುಗಳನ್ನು ಬಳಸಿ ಹೊಸ ಹೊಸ ಬಗೆಯ ಆಭರಣಗಳನ್ನು ತಯಾರಿಸುತ್ತಿದ್ದಾರೆ. ಈ ಆಭರಣಗಳು ಕೂಡ ಟ್ರೆಂಡಿಯಾಗಿವೆ. ಬೆಲ್ಲಿ ಡ್ಯಾನ್ಸರ್‌ಗಳ ಹಾಟ್ ಫೇವರೆಟ್ ಎನಿಸಿರುವ ಈ ಕೂಚಿ ಆಭರಣಗಳಲ್ಲಿ ಸೊಂಟಪಟ್ಟಿಯಲ್ಲಿ ಬಳಸುವ ದೊಡ್ಡ ಪೆಂಡೆಂಟ್‌ಗಳು ಮತ್ತು ಕನ್ನಡಿಗಳನ್ನು ಕಿವಿಯೋಲೆ, ಉಂಗುರ, ಸರ, ಸೊಂಟಪಟ್ಟಿ ಮತ್ತು ಹಣೆಯ ಸುತ್ತ ಕಟ್ಟುವ ಪಟ್ಟಿಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಈ ದೊಡ್ಡ ಪೆಂಡೆಂಟ್‌ಗಳೇ ಅಫ್ಘಾನಿ ಕೂಚಿ ಆಭರಣಗಳ ವೈಶಿಷ್ಟ್ಯ ಎನ್ನಲಾಗುತ್ತಿದೆ. ■